# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 189-ಹೊಂಗಸಂದ್ರ,

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಅಧ್ಯಕ್ಷರು / ನೋಡಲ್ ಅಧಿಕಾರಿ, ಕಾರ್ಯಪಾಲಕ ಅಭಿಯಂತರರು (ಎಸ್.ಡಬ್ಲ್ಯೂ.ಡಿ) ರವರು ದಿನಾಂಕ: 05.03.2022 ರಂದು ಶನಿವಾರ ಮಧ್ಯಾಹ್ನ 12:00 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.189 ಹೊಂಗಸಂದ್ರ ವಾರ್ಡ್ ಕಛೇರಿ, ಬೇಗೂರು ಮುಖ್ಯ ರಸ್ತೆಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

**ಹಾಜರಿದ್ದ ಸಹಾಯಕ ಅಭಿಯಂತರರು/ ಕಾರ್ಯದರ್ಶಿ, ಸದಸ್ಯರುಗಳು,**
**ಹಾಜರಿದ್ದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 1 | ಶ್ರೀಮತಿ ಮಾಲತಿ | ನೋಡಲ್ ಅಧಿಕಾರಿಗಳು/ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ |
| | ಶ್ರೀ ಕೆ.ಎಸ್. ರಾಮೇಗೌಡ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂ. 189, ಹೊಂಗಸಂದ್ರ |
| 2 | ಶ್ರೀ ಕೋದಂಡರಾಮ ರೆಡ್ಡಿ | ಸದಸ್ಯರು |
| 3 | ಶ್ರೀ ಸಂತೋಷ.ಕೆ | ಸಹಾಯಕ ಸಬ್ ಇನ್ಸ್‌ಪೆಕ್ಟರ್ (ಎ.ಎಸ್.ಐ) ಬೇಗೂರು ಪೋಲಿಸ್ ಠಾಣೆ. |
| 3 | ಡಾ॥ ರಂಗರಾಜನ್ ಬಿ | ಪ್ರಾಥಮಿಕ ಆರೋಗ್ಯ ಕೇಂದ್ರ ವೈದ್ಯಕೀಯ ಅಧಿಕಾರಿ |
| 4 | ಶ್ರೀ ಹೆಚ್. ವೆಂಕಟೇಶ್ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾ.ಸಂ. 189 |
| 5 | ಶ್ರೀ ಸಂತೋಷ ಪ್ರಸಾದ್.ಎಮ್ | ಸಹಾಯಕ ಅಭಿಯಂತರರು,ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 6 | ಶ್ರೀ ಮಹೇಶ್ ಕುಮಾರ್ ಎಸ್ | ಕಿರಿಯ ಅಭಿಯಂತರರು, ಬೆಸ್ಕಾಂ |
| 7 | ಶ್ರೀ ಪುಟ್ಟಸ್ವಾಮಿ | ಕಿರಿಯ ಅಭಿಯಂತರರು, ಬೆಸ್ಕಾಂ |
| 8 | ಶ್ರೀ ವಿನೋದ್ ಕುಮಾರ್.ಟಿ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾ.ಸಂ. 189 |
| 9 | ಶ್ರೀ ದೀಪಕ ಸಾವಾಡಕರ್ | ಕಂದಾಯ ಪರಿವೀಕ್ಷಕರು |

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು ಹಾಗೂ ಸದಸ್ಯರನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸಲಾಗಿ ಸಭೆಯನ್ನು ಪ್ರಾರಂಭಿಸಿದರು.

- **ಆರೋಗ್ಯ ಇಲಾಖೆ (ಕೋವಿಡ್-19) :-**

1. ಡಾ. ರಂಗರಾಜನ್ ಬಿ, ರವರು ವಾರ್ಡ್ ವ್ಯಾಪ್ತಿಯಲ್ಲಿ ದಿನಾಂಕ: 31.01.2022 ರಿಂದ ಇಲ್ಲಿಯವರೆಗೂ ಕೋವಿಡ್ ಪರೀಕ್ಷೆ ನಡೆಸಿರುವ ಬಗ್ಗೆ ವಿವರಿಸುತ್ತಾ,

   RTPCR - ಒಟ್ಟು 5117 ಪರೀಕ್ಷೆ ಮಾಡಲಾಗಿದ್ದು

   Rapid - ಒಟ್ಟು 2545 ಪರೀಕ್ಷೆ ಮಾಡಲಾಗಿರುತ್ತದೆ ಹಾಗೂ ಇದರಲ್ಲಿ ಹೋಂ ಐಸೋಲೇಷನ್ 81 ಪ್ರಕರಣ, ಚಾಲ್ತಿಯಲ್ಲಿರುವ ಪ್ರಕರಣ-1, ಆಸ್ಪತ್ರೆಯಲ್ಲಿ-1 ಒಂದು ಸಾವು ಸಂಭವಿಸಿದೆ ಎಂದು ಸಭೆಯಲ್ಲಿ ಹಾಜರಿದ್ದ ಡಾ॥ ರಂಗರಾಜನ್.ಬಿ, ಆರೋಗ್ಯ ವೈದ್ಯಾಧಿಕಾರಿಗ ರವರು ಸಭೆಗೆ ತಿಳಿಸಿದರು.



Scanned with

2. ಡಾ॥ ರಂಗರಾಜನ್.ಬಿ ರವರು ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಲಸಿಕೆ ನೀಡಿರುವ ಬಗ್ಗೆ ವಿವರಿಸುತ್ತಾ, ದಿನಾಂಕ: 31.01.2022 ರಿಂದ 05.03.2022 ರವರೆಗೆ 18 ವರ್ಷ ಮೇಲ್ಪಟ್ಟ ವಯಸ್ಸಿನವರಿಗೆ ಒಟ್ಟು 74605, 1ನೇ ಡೋಸ್, ಹಾಗೂ 76,575.00 2ನೇ ಡೋಸ್ ಲಸಿಕೆಗಳನ್ನು ನೀಡಲಾಗಿರುತ್ತದೆ ಹಾಗೂ 15-ರಿಂದ 17ನೇ ವಯಸ್ಸಿನ ಮಕ್ಕಳಿಗೆ 2070 1ನೇ ಮತ್ತು 2ನೇ ಡೋಸ್ ಲಸಿಕೆಗಳನ್ನು ಪೂರ್ಣ ಪ್ರಮಾಣದಲ್ಲಿ ನೀಡಲಾಗಿರುತ್ತದೆ ಎಂದು ಸಭೆಗೆ ತಿಳಿಸಿರುತ್ತಾರೆ.

- ರಾಜ್ಯದಾದ್ಯಂತ ದಿನಾಂಕ: 27.02.2022 ರಂದು ಪಲ್ಸ್ ಪೋಲಿಯೋ ಅಭಿಯಾನ 5 ಐದು ವರ್ಷದೊಳಗಿನ ಮಕ್ಕಳಿಗೆ ಹಮ್ಮಿಕೊಂಡಿದ್ದು, ಒಟ್ಟು 11,278.00 (ಶೇ 102.07) ರಷ್ಟು ಪೋಲಿಯೋ ಹನಿಗಳನ್ನು ನೀಡಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

- **ಬೆಸ್ಕಾಂ :-**

1. ವಾರ್ಡ್ ವ್ಯಾಪ್ತಿಯ 2ನೇ, 3ನೇ ಮತ್ತು 4ನೇ ಅಡ್ಡ ರಸ್ತೆಯಲ್ಲಿ ವಿದ್ಯುತ್ ವಾಹಕಗಳನ್ನು ಬದಲಾಯಿಸಲು ಶ್ರೀ ಕೋದಂಡರಾಮ ರೆಡ್ಡಿ ರವರು ಸಭೆಯಲ್ಲಿ ಕೋರಿದ್ದು, ಎಲ್ಲಾ ಕಡೆ ವಿದ್ಯುತ್ ವಾಹಕಗಳನ್ನು ಜೋತು ಬಿದ್ದಿದ್ದು, ಹಾಲಿರುವುದುನ್ನು ತೆರವುಗೊಳಿಸಿ ಹೊಸದಾಗಿ ಕೇಬಲ್ ಅಳವಡಿಸಲು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ.

- **ಘನತ್ಯಾಜ್ಯ:-**

1. ವಾರ್ಡ್ ವ್ಯಾಪ್ತಿಯ ವಾಯಬೇಯಿ ನಗರ ವಾಣಿಜ್ಯ ಮಳಿಗೆಗಳ ಮತ್ತು ರೆಸ್ಟೋರೆಂಟ್‌ಗಳಲ್ಲಿ ಬೆಳಿಗ್ಗೆ 3.00 ಗಂಟೆ ವರೆಗೂ ವ್ಯಾಪಾರ ನಡೆಸುತ್ತಿರುವುದಾಗಿ ಶ್ರೀ ಕೋದಂಡರಾಮ ರೆಡ್ಡಿ ರವರು ಸಭೆಯಲ್ಲಿ ತಿಳಿಸಿದ್ದು, ಈ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರು, ರವರು ಸಭೆಯಲ್ಲಿ ಹಾಜರಿದ್ದ ಮಾರ್ಷಲ್‌ಗೆ ಸ್ಥಳ ಪರಿಶೀಲಿಸಿ ಮಾಲೀಕರಿಗೆ ಎಚ್ಚರಿಕೆ ನೀಡಲು ಸೂಚಿಸಿದ್ದರು.
2. ವಾರ್ಡ್ ವ್ಯಾಪ್ತಿಯ ಪಾದಚಾರಿ ಮಾರ್ಗಗಳಲ್ಲಿ ತಳ್ಳುವ ಗಾಡಿಯಲ್ಲಿ ವ್ಯಾಪಾರ ನಡೆಸುತ್ತಿದ್ದು, ಇದರಿಂದ ಸಾರ್ವನಿಕರಿಗೆ ಓಡಾಡಲು ಕಷ್ಟಕರವಾಗುತ್ತಿದೆ ಎಂದು ಸಭೆಯಲ್ಲಿ ಶ್ರೀ ಕೋದಂಡರಾಮ ರೆಡ್ಡಿ ರವರು ಸಭೆಯಲ್ಲಿ ತಿಳಿಸಿದ್ದು, ಈ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರು, ರವರು ಪೋಲಿಸ್ ಇನ್ಸ್‌ಪೆಕ್ಟರ್ ರವರಿಗೆ ಪಾದಚಾರಿ ಮಾರ್ಗವನ್ನು ತೆರವುಗೊಳಿಸಲು ಸಹಕಾರ ನೀಡುವಂತೆ ಪತ್ರ ಬರೆದು, ಪಾದಚಾರಿ ಮಾರ್ಗಕ್ಕೆ ಅಡಚಣೆ ಮಾಡಿರುವ ತಳ್ಳುವ ಗಾಡಿಗಳನ್ನು ತೆರವುಗೊಳಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.
3. ವಾರ್ಡ್ ವ್ಯಾಪ್ತಿಯಲ್ಲಿ ಸೊಳ್ಳೆ ಔಷದಿ ಮತ್ತು bleaching powder ಸಿಂಪಡಿಸುವಂತೆ ವಾರ್ಡ್ ಸದಸ್ಯರು ಕೋರಿದರು, ಈ ಬಗ್ಗೆ ಕ್ರಮ ವಹಿಸಲಾಗುವುದೆಂದು ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಯಲ್ಲಿ ತಿಳಿಸಿದ್ದರು.

ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿ, ಸಭೆಯಲ್ಲಿ ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿಗಳ ಅನುಪಸ್ಥಿಯಲ್ಲಿ ಕಾರ್ಯದರ್ಶಿಗಳು/ಸಹಾಯಕ ಅಭಿಯಂತರರು ರವರು ವಾರ್ಡ್ ಸಮಿತಿ ಸಭೆಯನ್ನು ವಂದಾನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

15/3/22

ಕಾರ್ಯದರ್ಶಿ ವಾರ್ಡ್ ಸಂಖ್ಯೆ: 189ರ
ಸಹಾಯಕ ಅಭಿಯಂತರರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ನೋಡಲ್ ಅಧಿಕಾರಿ
ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1) ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ಸಲ್ಲಿಸಿದೆ
2) ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ
4) ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6) ವಾರ್ಡ್ ಸಮಿತಿಯ ಸದಸ್ಯರ / ಸ್ವಯಂ ಸೇವಕರ ಮಾಹಿತಿಗಾಗಿ ಸಲ್ಲಿಸಿದೆ.
7) ಕಛೇರಿ ಪ್ರತಿ.

Scanned with